

ಬಂದೇ ನವಾಜ್ ದರ್ಗಾ ಕಲಬುರ್ಗಿಯ ಸಾಮರಸ್ಯಚರಿತೆಯ ಮೂರ್ತರೂಪ. ಈ ದರ್ಗಾದ ಹೆಸರಿಗೆ ಕಾರಣರಾದ ಸೂಫಿ ಸಂತ ಕವಿಯಾದ ಬಂದೇ ನವಾಜರು ಉರ್ದುವಿನ ಮೊದಲ ಕವಿ ಎನ್ನುವ ಹೆಗ್ಗಳಿಕೆಗೂ ಪಾತ್ರರು.

# ಕಲ್ಲು-ಹೂ ರೂಪಕದ ಕಲಬುರ್ಗಿ

## ಕನ್ನಡದ ತೇರೆಳೆಯಲು ಬಂದವರು ಊರನ್ನೂ ಕಣ್ತುಂಬಿಕೊಳ್ಳಿ

ಫೆ. 5ರಿಂದ ಮೂರು ದಿನಗಳ ಕಾಲ ಕಲಬುರ್ಗಿಯಲ್ಲಿ 85ನೇ ಕನ್ನಡ ಸಾಹಿತ್ಯ ಸಮ್ಮೇಳನ. ಸಮ್ಮೇಳನಕ್ಕೆ ಬರುವ ಸಹೃದಯರಿಗೆ ಸಾಹಿತ್ಯದ ರಸಗವಳದೊಂದಿಗೆ ನೋಟವೂ ಬೇಕು. ನೋಟವನ್ನು ಬಯಸುವ ರಸಿಕರ ಪಾಲಿಗೆ ಕಲಬುರ್ಗಿ ಅಪೂರ್ವ ಚಿತ್ರಪಟಗಳ ಸಂಕಲನ. ಕನ್ನಡ ಸಂಸ್ಕೃತಿಯ ಔದಾರ್ಯ ಮತ್ತು ಸಮೃದ್ಧಿಯ ಉತ್ತುಂಗವನ್ನು ಕಾಣಲಿಕ್ಕೆ ಕಲಬುರ್ಗಿಗಿಂತಲೂ ಉತ್ತಮ ಸ್ಥಳ ಮತ್ತೊಂದು ಸಿಗುವುದು ಕಷ್ಟ.

■ ಎ. ರಾಮು

ಚಿತ್ರಗಳು: ತಾಜುದ್ದೀನ್ ಆಜಾದ್